**1** ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**,** ಪಾಂಡವಪುರ

ದಿನಾಂಕ **05.09.2026**

ಸಿ.ಸಿ.ಸಂಃ **295/2025**

| | |
|---|---|
| ಪಿರ್ಯಾದಿದಾರರುಃ | ಕರ್ನಾಟಕ ರಾಜ್ಯದ ಪರವಾಗಿ<br>ಪೊಲೀಸ್ ಉಪನಿರೀಕ್ಷಕರು<br>ಮೇಲುಕೋಟೆ ಪೊಲೀಸ್ ಠಾಣೆ<br>ಪಾಂಡವಪುರ - |

- ವಿರುದ್ಧ -

| | |
|---|---|
| ಆರೋಪಿತೆಃ | ಸ್ವಾತಿ ಕೆ ಕೋಂ ಪ್ರಮೋದ್, 27 ವರ್ಷ, ವಾಸಃ ಎಂ ಶೆಟ್ಟಹಳ್ಳಿ ಗ್ರಾಮ, ಮೇಲುಕೋಟೆ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ. |

ದೋಷಾರೋಪಣೆ

ಶ್ರೀ**.** ಶ್ರೀಧರ ಹೆಚ್ ಡಿ**,** ಬಿ ಎ**.** ಎಲ್ ಎಲ್ ಬಿ**.,** **1** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ**,** ಪಾಂಡವಪುರ ಆದ ನಾನು ಆರೋಪಿತೆಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ**,**

ದಿನಾಂಕ 08.03.2025 ರಂದು ಬೆಳಿಗ್ಗೆ ಸುಮಾರು 6.30 ಗಂಟೆ ಸಮಯದಲ್ಲಿ ಮೇಲುಕೋಟೆ ಪೋಲೀಸ್ ಠಾಣಾ ಸರಹದ್ದಿನ ಎಂ ಶೆಟ್ಟಹಳ್ಳಿ ಗ್ರಾಮದಲ್ಲಿರುವ ಚಾಸಾ 1 ರವರಿಗೆ ಸೇರಿದ ವಾಸದ ಮನೆಗೆ ಆರೋಪಿಯಾದ ನೀವು ಅಕ್ರಮವಾಗಿ ಪ್ರವೇಶ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.329(4) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ 1 ರವರಿಗೆ ಈ ಮನೆ ಬಿಟ್ಟು ಹೋಗು ಲೋಪರ್ ಮುಂಡೆ, ಮುದಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.351(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ 1 ರವರ ಮುಂದಾಲೆಯನ್ನು ಹಿಡಿದು ಎಳೆದಾಡಿ ಅಪಾಯಕಾರಿ ಆಯುಧವಾದ ದೊಣ್ಣೆಯಿಂದ ತಲೆಗೆ, ಸೊಂಟಕ್ಕೆ ಬೆನ್ನಿಗೆ ಹೊಡೆದು ಒದ್ದು ಹಲ್ಲೆ ಮಾಡಿದ್ದು, ಆ ಮೂಲಕ ನೀವು

ಭಾರತೀಯ ನ್ಯಾಯ ಸಂಹಿತೆ ಕಲಂ.118(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ 1 ರವರಿಗೆ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.351(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಪ್ರ.ನಂ.1ಃ ನೀವು ಈ ಮೇಲಿನ ಆರೋಪಣೆಯನ್ನು ಓದಿ ಹೇಳಿದ್ದು ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರ.ನಂ.2ಃ ನೀವು ಈ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಾದಿಸುವಿರಾ?

ಉತ್ತರಃ

ಆರೋಪಿತೆಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿದ ಬಳಿಕ ಅವರು ಹೇಳಿಕೆಗಳನ್ನು ಪಡೆದಿದ್ದು ಅದು ಅವರ ಸತ್ಯ ಹಾಗೂ ಸಂಪೂರ್ಣವಾದ ಹೇಳಿಕೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**(ಶ್ರೀಧರ ಹೆಚ್ ಡಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಪಾಂಡವಪುರ.

ಆರೋಪಿಯ ಸಹಿಃ